## ಕರ್ನಾಟಕ ಅರಣ್ಯ ಇಲಾಖೆ

## ಕಾಳಿ ಹುಲಿ ಸಂರಕ್ಷಿತ ಪ್ರದೇಶ,ದಾಂಡೇಲಿ
### ಕುಳಗಿ ವನ್ಯಜೀವಿ ವಲಯ

# ಚಿಣ್ಣರ ವನ–ದರ್ಶನ–2019–20

## ಸಂಕ್ಷೀಪ್ತ ಸಂಗ್ರಹ

**ಸರಕಾರಿ ಪ್ರೌಢ ಶಾಲೆ ಭಗವತಿ (8ನೇ ವರ್ಗ)**

**ದಿನಾಂಕ: 29.07.2019 ರಿಂದ 30.07.2019 ವರೆಗೆ**

## ಸಂಕ್ಷೀಪ್ತ ಸಂಗ್ರಹ

ದಿನಾಂಕ: 29.07.2019 ಮತ್ತು 30.07.2019 ರಂದು ಕುಳಗಿ ವನ್ಯಜೀವಿ ವಲಯದ ವತಿಯಿಂದ ಸರಕಾರಿ ಪ್ರೌಢ ಶಾಲೆ ಭಗವತಿಯ ಮಕ್ಕಳಿಗೆ ಕರ್ನಾಟಕ ಸರ್ಕಾರದ ಕಾರ್ಯಕ್ರಮದಂತೆ 2019ನೇ ಸಾಲಿನ ಚಿಣ್ಣರ ವನ-ದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸದರಿ ಕಾರ್ಯಕ್ರಮದ ಕುರಿತು ವೇಳಾಪಟ್ಟಿಯನ್ನು ತಯಾರಿಸಿ ಸದರಿ ವೇಳಾಪಟ್ಟಿಯಂತೆ ದಿನಾಂಕ: 29.07.2019 ರ ಬೆಳಿಗ್ಗೆ ಭಗವತಿ ಪ್ರೌಢ ಶಾಲೆಯ ಎಲ್ಲಾ ವಿಧ್ಯಾರ್ಥಿಗಳು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ಮತ್ತು ಇಲಾಖಾ ಸಿಬ್ಬಂದಿಗಳು ಸರಿಯಾಗಿ 7:30 ಕ್ಕೆ ಸೇರಿಕೊಂಡೆವು. ಈ ಕಾರ್ಯಕ್ರಮಕ್ಕೆ ಶ್ರೀ. ಮಂಜುನಾಥ ಬಟಕುರ್ಕಿ ಉಪ ವಲಯ ಅರಣ್ಯಾಧಿಕಾರಿ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಇಲಾಖಾ ವತಿಯಿಂದ ಡಾ॥ಸಂತೋಷಚವ್ಹಾಣ ವಲಯ ಅರಣ್ಯಾಧಿಕಾರಿ ಕುಳಗಿ ವನ್ಯಜೀವಿ ವಲಯ. ಶ್ರೀ. ನೂರಂದಪ್ಪಾ ಲಮಾಣಿ ಮತ್ತು  ಶ್ರೀ. ಮಂಜುನಾಥ ಉಪ ವಲಯ ಅರಣ್ಯಾಧಿಕಾರಿ ಕುಳಗಿ ವಲಯ, ಶ್ರೀ. ಎಸ್. ಬಿ ವೆಂಕಟೇಶ ಅರಣ್ಯ ರಕ್ಷಕ ಕುಳಗಿ ವಲಯ ಮತ್ತು ಶಿಕ್ಷಕ ಶಿಕ್ಷಕೀಯ ವೃಂದದಿಂದ ಹಾಗೂ 8 ನೇ ತರಗತಿಯ ಎರಡು ಶಾಲೆಯಿಂದ  ಒಟ್ಟೂ 50 ವಿದ್ಯಾರ್ಥಿಗಳು (ವಿದ್ಯಾರ್ಥಿಗಳ ಪಟ್ಟಿಯನ್ನು ಲಗ್ತತಿಸಿದೆ) ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಹಾಗೂ ವೇಳಾಪಟ್ಟಿಯಂತೆ ಬೆಳಿಗ್ಗೆ7:30ಕ್ಕೆ ದಾಂಡೇಲಿಯ ದಂಡಕಾರಣ್ಯ ಇಕೋಪಾರ್ಕಾನಲ್ಲಿ ಸೇರಿಕೊಂಡು ಬೆಳಿಗ್ಗೆಯ ಉಪಹಾರ ಸೇವಿಸಿ ನಂತರ 8:30 ಕ್ಕೆ ಸದರ ಕಾರ್ಯಕ್ರಮದ ಕುರಿತು ಡಾ॥ ಸಂತೋಷಚವ್ಹಾಣ ವಲಯ ಅರಣ್ಯಾಧಿಕಾರಿ ಕುಳಗಿರವರು  ಪ್ರಾಸ್ತಾವಿಕವಾಗಿ ಮಾತನಾಡಿ ಚಿಣ್ಣರ ವನದರ್ಶನಕಾರ್ಯಕ್ರಮದ ಕುರಿತು ವಿವರಿಸಿ ಮತ್ತು ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರು ಮತ್ತುವಿದ್ಯಾರ್ಥಿಗಳಿಗೆ ಹಾಗೂ ಅರಣ್ಯ ಸಿಬ್ಬಂದಿಗಳಿಗೆ ಕಾರ್ಯಕ್ರಮಕ್ಕೆ ತುಂಬುಹೃದಯದಿಂದ ಸ್ವಾಗತಿಸುತ್ತಾ ಚಿಣ್ಣರ ವನದರ್ಶನ 2019 ರಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ವೇಳಾಪಟ್ಟಿಯಂತೆ ದಾಂಡೇಲಿಯ ದಂಡಕಾರಣ್ಯ ಇಕೋಪಾರ್ಕನಲ್ಲಿ ಇರುವ ವಿವಿಧ ಜಾತಿಯ ಮರಗಳು ಇತರೆ ಕಾಡಿನ ಬಗ್ಗೆ ಮಾಹಿತಿ ನೀಡುವ ಸ್ಥಬ್ದ ಚಿತ್ರಗಳ ಮಾಹಿತಿಯನ್ನು ಸದರಿ ಇಕೋಪಾರ್ಕಿನ ಮಾರ್ಗದರ್ಶಕರಾದ ಶ್ರೀ. ಮಾರುತಿ ಗೌಡರವರು ಮಕ್ಕಳಿಗೆ ತಿಳಿ ಹೇಳಿದರು. ಇಲ್ಲಿ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಂಪನ್ಮೂಲ ವ್ಯಕ್ತಿಯೊಂದಿಗೆ ಗುಂಪು ಭಾವ ಚಿತ್ರ ತೆಗೆಸಲಾಯಿತು. ಸದರ ಪಾರ್ಕಿನಿಂದ ಸರಿಯಾಗಿ ಸಮಯ 11:30ಕ್ಕೆ  ಮೌಳಂಗಿ ಇಕೋಪಾರ್ಕಿಗೆ ತೆರಳಲಾಯಿತು.

ಸಮಯ ಸರಿಯಾಗಿ 12:00 ಕ್ಕೆ ಮೌಳಂಗಿ ಇಕೋಪಾರ್ಕ ತಲುಪಿ ಚಹಾ ಮತ್ತು ಬಿಸ್ಕತ್ ಸೇವಿಸಿ ಸದರ ಪಾರ್ಕನ ಮಾರ್ಗದರ್ಶಕರು ಮಕ್ಕಳಿಗೆ ಪರಿಸರದ ಬಗ್ಗೆ ಹೇಳಿದರು. ನಂತರ ಎಲ್ಲಾ ಮಕ್ಕಳನ್ನು ಸದರ ಪಾರ್ಕಿನಲ್ಲಿರು ಆಟೋಪಕರಣಗಳು ಮತ್ತು ವಿವಿಧ ಕ್ರೀಡಾ ಚಟುವಟಿಕೆಯಲ್ಲಿ

ಪಾಲ್ಗೊಂಡರು. ಸಮಯ ಸರಿಯಾಗಿ 1:00 ಘಂಟೆಗೆ ದಾಂಡೇಲಿ ಮಾರ್ಗವಾಗಿ ಕುಳಗಿ ವನ್ಯಜೀವಿ ವಲಯದ ಪ್ರಕೃತಿ ಶಿಬಿರಕ್ಕೆ ತಲುಪಿದರು.

ಕುಳಗಿ ಪ್ರಕೃತಿ ಶಿಬಿರದಲ್ಲಿ ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು ಸಮಯ 2:00ಕ್ಕೆ ಪ್ರಕೃತಿ ನಿರೂಪಣಾ ಕೇಂದ್ರಕ್ಕೆ ಬೇಟಿ ನೀಡಿದರು. ಇಲ್ಲಿಯ ನಿಸರ್ಗ ಮಾರ್ಗದರ್ಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಂಡು ಬರುವ ವಿವಿಧ ಜಾತಿಯ ಕಾಡು ಮರಗಳು ಮತ್ತು ಕಾಡು ಪ್ರಾಣಿಗಳು, ಅವುಗಳ ಪ್ರಾಮುಖ್ಯತೆಯನ್ನು ವಿವರಿಸಿದರು. ಇಲ್ಲಿಂದ ಸರಿಯಾಗಿ ಸಮಯ 2:30 ಕ್ಕೆ ಅಂಬಿಕಾನಗರದ ಜಯಚಾಮರಾಜೇಂದ್ರ ಒಡೆಯರ ವೀಕ್ಷಣಾ ಗೋಪುರಕ್ಕೆ ತೆರಳಲಾಯಿತು. ಇಲ್ಲಿ ಶ್ರೀ. ನೂರಂದಪ್ಪಾ ಲಮಾಣಿ ಉಪ ವಲಯ ಅರಣ್ಯಾಧಿಕಾರಿ ಮತ್ತು ಶ್ರೀ. ಎಮ್. ಪಿ. ಪಾಟೀಲ್, ಅರಣ್ಯ ರಕ್ಷಕ ಇವರು ಕರ್ನಾಟಕ ವಿದ್ಯುತ ನಿಗಮ ಮಂಡಲಿ ಮತ್ತು ಅರಣ್ಯ ಇಲಾಖೆಯ ಪರಿಸರದ ಬಗ್ಗೆ ಉಪಯುಕ್ತವಾದ ಮಾಹಿತಿಗಳನ್ನು ಮಕ್ಕಳಿಗೆ ತಿಳಿಸಿದರು. ಇಲ್ಲಿ ವನ್ಯಜೀವಿ ವಲಯ ಫಣಸೋಲಿ ಮತ್ತು ಕ್ಯಾಸಲ್ ರಾಕ್ ವಲಯ ಅರಣ್ಯಾಧಿಕಾರಿಗಳ ಉಪಸ್ಥಿತರಿದರು. ಇಲ್ಲಿಂದ ಸಮಯ 3:30ಕ್ಕೆ ಹೊರಟು ಕುಳಗಿ ಮಾರ್ಗವಾಗಿ ಸಫಾರಿಗಾಗಿ ಫಣಸೋಲಿ ವನ್ಯಜೀವಿ ವಲಯ ತಲುಪಿದರು.

ಸಮಯ 4:00ಕ್ಕೆ ಫಣಸೋಲಿ ವಲಯದ ಸಫಾರಿ ಗೇಟನಿಂದ ಹೊರಟು ಸುಮಾರು 3 ಕಿ.ಮೀ. ದೂರದಲ್ಲಿ ಜಿಂಕೆಗಳ ಗುಂಪು ಮತ್ತು ಸ್ವಲ್ಪ ದೂರಲ್ಲಿ ಎರಡು ನವಿಲು, ಕಾಡು ಕೋಳಿ, ಕಾಡು ಕುರಿ, ಹದ್ದುಗಳು, ಹಾರ್ನಬಿಲ್ ಪಕ್ಷಿಗಳು, ಹಸಿರು ಹಾವು ಮತು ಕಾಡುಕೋಣಗಳನ್ನು ಕಂಡು ಮಕ್ಕಳು ಖುಷಿಯಾದರು.

ಆನಂತರ ಸಮಯ 5:00ಕ್ಕೆ ಷಣ್ಮುಗ ವೀಕ್ಷಣಾ ಗೋಪುರಕ್ಕೆ ತಲುಪಿ ಇಲ್ಲಿ ಮಕ್ಕಳು ಸೂರ್ಯಾಸ್ಥವನ್ನು ನೋಡಿ ಆನಂದಿಸಿದರು. ಇಲ್ಲಿ ವಲಯ ಅರಣ್ಯಾಧಿಕಾರಿ, ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ಕಾಡಿನ ಸಂರಕ್ಷಣೆ ಕುರಿತು ಆಟೋಟಗಳ ಮುಲಕ ತಿಳಿಸಿದರು. ಇಲ್ಲಿಂದ ಹೊರಟು ಸಮಯ 6:30ಕ್ಕೆ ಕುಳಗಿ ಪ್ರಕೃತಿ ಶಿಬಿರಕ್ಕೆ ತಲುಪಿ ಸಾಯಂಕಾಲದ ಲಘುಪಹಾರ ಸೇವಿಸಿ ಮಕ್ಕಳಿಗೆ ಒಂದು ಘಂಟೆಕಾಲ ವಿಶ್ರಾಂತಿ ನೀಡಲಾಯಿತು.

ಸಮಯ 7:30ರಿಂದ 8:30ರವರೆಗೆ ಸಂಪನ್ಮೂಲ ವ್ಯಕ್ತಿ ಶ್ರೀ. ಕೂಡ್ಲಿಗಿ ಸಂತೋಷ ಅರಣ್ಯ ರಕ್ಷಕ ಹಾವಿನ ಬಗ್ಗೆ ಮಾಹಿತಿ ನೀಡಿದರು. ಸದರಿ ತರಗತಿಯಲ್ಲಿ ಮಕ್ಕಳಿಗೆ ಹಾವುಗಳನ್ನು ಗುರುತಿಸುವುದು, ಸಂರಕ್ಷಣೆ ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ಪರಿಣಾಮಕಾರಿಯಾಗಿ ತಿಳಿಸಿದರು. ನಂತರ ಸಮಯ ಸರಿಯಾಗಿ 8.30ಕ್ಕೆ ರಾತ್ರಿಯ ಊಟಕ್ಕೆ ವಿರಾಮ ನೀಡಲಾಯಿತು. ನಂತರ ರಾತ್ರಿ 9.30ಕ್ಕೆ ಮಕ್ಕಳಿಗೆ ನೀಡಲಾಗಿದ್ದ ಟೆಂಟ್‌ಗಳಿಗೆ ಹೋಗಲು ಹೇಳಿ ಸದರಿ ಶಿಬಿರದ ಶಿಸ್ತಿನ ಬಗ್ಗೆ ಹೇಲಿ ರಾತ್ರಿ ತಂಗಲು ಸೂಚಿಸಲಾಯಿತು.

ದಿನಾಂಕ: 30.07.2019 ರ ಮುಂಜಾನೆ 7.00 ಕ್ಕೆ ಸರಿಯಾಗಿ ಇಲ್ಲಿಯ ನಿಸರ್ಗ ಮಾರ್ಗದರ್ಶಕರು ಎಲ್ಲಾ ಮಕ್ಕಳನ್ನು ಪಕ್ಷಿ ವೀಕ್ಷಣೆಗೆಂದು ಕರೆದ್ಯೊಯಲಾಯಿತು. ಇಲ್ಲಿ ಮಕ್ಕಳಿಗೆ ಸದರಿ ಪ್ರದೇಶದಲ್ಲಿ ಕಂಡುಬರುವ ವಿವಿಧ ಪಕ್ಷಿಗಳನ್ನು ತೋರಿಸಿ, ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಹೇಳಿದರು. ಇಲ್ಲಿ ಮಕ್ಕಳಿಗೆ ಡ್ರ್ಯಾಂಗೋ, ಪಾರಿವಾಳ, ಬಾರಬೆಟ್, ನೀಲಕಂಠ ನೋಡಲು ಸಿಕ್ಕಿತು. ನಂತರ ಶಿಬಿರ ತಲುಪಿ ಬೆಳಗಿನ ಉಪಹಾರವನ್ನು ಸೇವಿಸಲಾಯಿತು.

ಸಮಯ 8.30 ರಿಂದ 9.30 ವರೆಗೆ ಶಿಬಿರದ ನಾಗಝರಿ ಹಾಲಿನಲ್ಲಿ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪ್ರಾಣಿ, ಕಾಡು ಮರಗಳು ಮತ್ತು ಪ್ರಾಮುಖ್ಯತೆನ್ನು ಸಾರಿ ಹೇಳುವ ವಿಡಿಯೋವನ್ನು ತೋರಿಸಲಾಯಿತು. ಸಮಯ 10.00 ರಿಂದ 10.30ವರೆಗೆ ಮಕ್ಕಳಿಗಾಗಿ ರಸ ಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಯಿತು. ಶಾಲೆಯ ಮಕ್ಕಳಿಗೆ ಬೇರೆ–ಬೇರೆಯಾಗಿ ಪ್ರಥಮ, ದ್ವಿತೀಯ ಹಾಗೂ ತೃತಿಯ ಸ್ಥಾನವನ್ನು ಆರಿಸಲಾಯಿತು.

**ಸ್ಪರ್ಧೆಯ ವಿಜೇತರು:**

**ಸರಕಾರಿ ಪ್ರೌಢ ಶಾಲೆ ಭಗವತಿ**

ಪ್ರಥಮ: ಅಶ್ವಿನಿ ಪರಸಪ್ಪ ನಾಯ್ಕ
ದ್ವಿತೀಯ : ಮೇಘಾ ಮಸಣಪ್ಪ ನಾಯಕ
ತೃತಿಯ: ಅಜಯ ವಿಷ್ಣು ಮಿರಾಶಿ

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶಿಕ್ಷಕರು ಭಗವತಿ ಪ್ರೌಢ ಶಾಲೆ ರವರು ಮಾತನಾಡಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯನ್ನು ಮಾಡುವಲ್ಲಿ ಬಹಳ ಪ್ರಮುಖ ಪಾತ್ರ ವಹಿಸುತ್ತಾರೆ. ಇಂದಿನ ಚಿಣ್ಣರು ನಾಳಿನ ನಾಗರಿಕರು ಮತ್ತು ಮುಂದಿನ ಪೀಳಿಗೆಗೆ ಶುದ್ಧವಾದ ವಾಯುವನ್ನು ನೀಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಡಾ॥ ಸಂತೋಷ ಚವ್ಹಾಣ ರವರು ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಚಿಣ್ಣರ ವನದರ್ಶನ ಸರ್ಕಾರದ ಒಂದು ಅತ್ಯಂತ ಕ್ರಿಯಾಶೀಲ ವೈಚಾರಿಕತೆಯಿಂದ ಕೂಡಿದ ಸರ್ಕಾರಿ ಕಾರ್ಯಕ್ರಮವಾಗಿದ್ದು ವಿದ್ಯಾರ್ಥಿಗಳಲ್ಲಿ ಅರಣ್ಯ ಮತ್ತು ವನ್ಯಜೀವಿ ಹಾಗೂ ಪರಿಸರದ ಬಗ್ಗೆ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮವು ಬಹಳಷ್ಟು ಪರಿಣಾಮಕಾರಿಯಾಗಿದ್ದು ಸದರ ಕಾರ್ಯಕ್ರಮವು ಫಲಪ್ರದವಾಗಬೇಕಾದರೆ ಇದು ಕೇವಲ ಪ್ರವಾಸವೆಂದು ಅರಿಯದೇ ಕುಳಗಿ ಪ್ರಕೃತಿಯಲ್ಲಿ ಕಲಿತ ವಿಷಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪರಿಸರ ಸಂರಕ್ಷಣೆ ಮಾಡುತ್ತೇವೆ ಎಂದು ಪಣತೋಡಲು ಹೇಳಿದರು.

ಸಮಾರಂಭದಲ್ಲಿ ಸದರ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆದು ಕೊಂಡು ಹೋಗಲು ಕಾರಣಿಕರ್ತರಾದ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಎಲ್ಲಾ ಅಧಿಕಾರಿ ವರ್ಗದವರಿಗೆ, ಕುಳಗಿ ವಲಯದ ಸಿಬ್ಬಂದಿಗಳು, ಅಡುಗೆಯ ಸಿಬ್ಬಂದಿಗಳು ಮತ್ತು ವಾಹನಗಳ

ಚಾಲಕರು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕುಳಗಿ ವನ್ಯಜೀವಿ ವಲಯದ ವತಿಯಿಂದ ಅಭಿನಂದನೆಗಳನ್ನು ತಿಳಿಸುತ್ತಾ ಸದರ ಕಾರ್ಯಕ್ರಮವನ್ನು ಮದ್ಯಾಹ್ನ 2:00 ಕ್ಕೆ ಮುಗಿಸಿ ಮಧ್ಯಾಹ್ನದ ಊಟದೊಂದಿಗೆ ಸದರ ಕಾರ್ಯಕ್ರಮವನ್ನು ಮುಗಿಸಲಾಯಿತು. ನಂತರ ಸದರಿ ವಲಯದ ಉಪ ವಲಯ ಅರಣ್ಯಾಧಿಕಾರಿಗಳು ಮಕ್ಕಳನ್ನು ತಮ್ಮ-ತಮ್ಮ ಮನೆಗಳಿಗೆ ಸುರಕ್ಷಿತವಾಗಿ ತಲುಪುವಲ್ಲಿ ಸಹಕರಿಸಿದರು.

**ಕಾಡು ಪ್ರಾಣಿಗಳಿಗೂ ಕುಟುಂಬವಿದೆ**

**--**--**



